ನಗರದ ತಾಲ್ಲೂಕು ಆಫೀಸಿನಲ್ಲಿ ಮುನ್ಷಿಯಾಗಿರುವ ಮಾವನ ದಿನಚರಿ ಸಾಮಾನ್ಯವಾಗಿ ಹೀಗಿರುತ್ತಿತ್ತು: ಬೆಳಿಗ್ಗೆ ಆರಕ್ಕೆಲ್ಲ ಎಚ್ಚರ. ಎದ್ದ ಕೂಡಲೇ ಅಂದಿನ ನಾಲ್ಕೈದು ದಿನಪತ್ರಿಕೆಗಳ ಮೇಲೆ ಕಣ್ಣಾಡಿಸುವುದು; ಅದರಲ್ಲಿ ಎರಡು ಇಂಗ್ಲಿಷ್ ಪತ್ರಿಕೆಗಳು ಕಡ್ಡಾಯ. ಜೊತೆಯಲ್ಲೇ ಕಾಫಿಯಾಗಬೇಕು. ನಂತರ ಸ್ನಾನ. ತಿಂಡಿಗೆ ಇಂತಹದ್ದೇ ಆಗಬೇಕು ಎಂಬ ಹಟವಿಲ್ಲ. ಸಾತ್ವಿಕ ಆಹಾರ ಸಾಮಾನ್ಯವಾಗಿ. ಅನಂತರ ಇಸ್ತ್ರಿ ಮಾಡಿದ ಬಟ್ಟೆ ತೊಟ್ಟು ತಾಲ್ಲೂಕು ಆಫೀಸಿಗೆ ಹೋಗುವುದು. ಇಪ್ಪತ್ತು ವರ್ಷದಿಂದ ಅವರು ಅಲ್ಲಿ ದುಡಿಯುತ್ತಿದ್ದಾರೆ. ಇಷ್ಟೊತ್ತಿಗೆ ಅವರು ಅಲ್ಲಿ ಹೆಡ್ ಮುನ್ಷಿಯಾಗಬೇಕಿತ್ತು. ಅದಕ್ಕೆ ಮೇಲಿನವರ ಮೆಹರ್ಬಾನಿ ಬೇಕಿತ್ತು. ಮೇಜಿನ ಕೆಳಗೆ ಸಂದಾಯದ ವಿಧಿ ಪೂರೈಸಬೇಕಿತ್ತು. ಮಾವ ಇದನ್ನು ಒಪ್ಪುವ ಪೈಕಿಯಲ್ಲ. ಮೇಲಾಗಿ ಅವರಿಗೆ ಕೈ ಆಸೆಯೂ ಇರಲಿಲ್ಲ. ಧರ್ಮ–ಕರ್ಮಕ್ಕೆ ಅಂಜುವವರು. ಆದರೆ ಮಾಮಿಗೆ ಇಷ್ಟು ವರ್ಷ ಸರ್ಕಾರಿ ಚಾಕರಿಯಲ್ಲಿದ್ದು ಗಂಡನಾದವನು ಒಂದು ಸ್ವಂತ ಗೂಡು ಕಟ್ಟಿಕೊಳ್ಳಲಿಲ್ಲವಲ್ಲ ಎಂಬ ಕೊರಗು. ಈ ಸಂಕಟ ಹೆಚ್ಚಾದಾಗೆಲ್ಲ ಅವರು ಸಂಪಂಗೆರೆ ಬೂಬಮ್ಮನ ಬಗ್ಗೆ ನಾಲಿಗೆ ಹರಿಬಿಡುವುದುಂಟು. 'ಗಳಿಸಿದ್ದೆಲ್ಲ ಆ ಬೂಬಮ್ಮನ ಮನೆಗೆ ಸುರಿದರೆ ಸ್ವಂತದ್ದು ಅಂತ ನಮ್ಮ ಮನೆ ಎಲ್ಲಿ ಕಟ್ಟಿಕೊಳ್ಳೋಕ್ಕಾಗುತ್ತೆ?' ಮಾತು ಮಾವನ ಕಿವಿಗೂ ಬಿದ್ದಿದೆ. ಅವರು ಅದಕ್ಕೆಲ್ಲ ಪ್ರತಿಕ್ರಿಯಿಸಲೂ ಹೋಗುತ್ತಿರಲಿಲ್ಲ.

ಮಾವನ ಕಚ್ಚೆ ಅಷ್ಟು ಸಡಿಲ ಎಂದು ನನಗೆ ತೋರುವುದಿಲ್ಲ. ಸಂತಾನ ಸಾಗದ್ದಕ್ಕೆ ಗಂಡನೂ ಕಾರಣ ಆಗಬಹುದು ಎಂಬ ವೈದ್ಯ ನುಡಿ ಮಾಮಿಯಲ್ಲಿ ಇಂತಹ ಕಲ್ಪನೆಗಳಿಗೆ ಜೀವ ತುಂಬಿತ್ತು. ಗಂಡ ಸತ್ತ ಸಂಪಂಗೆರೆ ಬೂಬಮ್ಮ ತಾಲ್ಲೂಕು ಆಫೀಸಿನಲ್ಲಿ ಚಪರಾಸಿಯಾಗಿದ್ದಳು. ತನ್ನ ಮೈಮಾಟ, ಬೆಲೆ ಬಾಳುವ ಸೀರೆ, ಒಡವೆಗಳ ದೆಸೆಯಿಂದ ಆಫೀಸಿನ ಅದರಲ್ಲೂ ಹೆಂಗಸರ ಈರ್ಷ್ಯಾಕುಂಡಕ್ಕೆ ಆಜ್ಯಾಹುತಿ ಮಾಡುತ್ತಿದ್ದಳು. ಚಪರಾಸಿಗೆ, ಅದೂ ಗಂಡ ಸತ್ತವಳಿಗೆ ಇಷ್ಟು ಡೌಲು ಇರಬಾರದು ಎಂಬುದೇ ಅವರ ಆಲೋಚನೆಯಾಗಿತ್ತು. ಈ ಉರಿ, ಸಂಕಟ, ಅವಳ ಬಗ್ಗೆ ಸಲ್ಲದ ಕತೆಗಳನ್ನು ತೇಲಿಸಿಬಿಡುವಂತಾಯಿತು. ಆ ಕಥೆಗಳಿಗೋ ಸಾವಿರ ಕಾಲುಗಳು. ಇವರೊಂದಿಗೂ ಆ ಚಿನಾಲಿ ಆಟ ಆಡದೆ ಬಿಟ್ಟಾಳೆಯೆ ಎಂಬ ನಿರ್ಣಯ ಮಾಮಿಯ ಮನಸ್ಸಿನಲ್ಲಿ ಸ್ಥಿರವಾಗುವುದಕ್ಕೆ ಹೆಚ್ಚಿನ ಸಮಯ ಹಿಡಿಯಲಿಲ್ಲ.

ಹದಿನಾರಾಣೆ ಗೃಹಿಣಿಯಾಗಿದ್ದ ಮಾಮಿಯ ದಿನಚರಿಯ ಹೆಚ್ಚಿನ ಪಾಲು ಮನೆವಾರ್ತೆಗಳಿಗೆ ಸೀಮಿತವಾಗಿರುತ್ತಿತ್ತು. ಮುಂಜಾನೆ ಉಷಃಕಾಲಕ್ಕೆ ಏಳುವುದು. ಸ್ನಾನಾದಿಗಳನ್ನು ಪೂರೈಸಿ, ಮಾವನ ಪೂಜೆಗೆ ಅಣಿ ಮಾಡುವುದು. ಅನಂತರ ಬೆಳಗಿನ ಕಾಫಿ ತಿಂಡಿ ತಯಾರಿಸುವುದು. ಮಾವನಿಗೆ ಬುತ್ತಿ ಕಟ್ಟಿಕೊಟ್ಟು ಕಳಿಸಿ, ನನಗೂ ತಿನಿಸಿ, ಕಟ್ಟಿ ಕಳುಹಿಸಿಕೊಟ್ಟ ಮೇಲೆ ಲಘು ನಿದ್ರೆ ತೆಗೆಯುತ್ತಾರೆ. ಮಧ್ಯಾಹ್ನ ಬಟ್ಟೆ ತೊಳೆಯುವ ಕಾರ್ಯಕ್ರಮ, ಸಂಜೆಗೆ ತಿರುಮಲಾಂಬ ರಸ್ತೆಯಲ್ಲಿರುವ ಮಾರುಕಟ್ಟೆಗೆ ನನ್ನ ಜೊತೆ ಹೋಗಿ ರಾತ್ರಿ ಹಾಗೂ ನಾಳೆಯ ದಿನದ ಅಡುಗೆ ಚಿಂತೆಗೆ ಪರಿಹಾರ ಹುಡುಕುತ್ತಾರೆ. ಪ್ರತಿ ಸೋಮವಾರ ತಪ್ಪದೆ ಉಪವಾಸ ಮಾಡುತ್ತಾರೆ. ಸಾಯಂಕಾಲಗಳಲ್ಲಿ ತಪ್ಪದೆ ದೇವರ ಕೋಣೆಯಲ್ಲಿ ತುಪ್ಪದ ದೀಪ ಹಚ್ಚಿಡುತ್ತಾರೆ. ಮಾಮಿಯ ಅಚ್ಚುಕಟ್ಟುತನ ಮಾವನಲ್ಲಿಲ್ಲ. ಅವರದು ರೂಢಿಯ ಪೂಜೆ. ಹಾಗಾಗಿ ಭಕ್ತಿಗಿಂತ ಕರ್ತವ್ಯ ಅಲ್ಲಿ ಹೆಚ್ಚು ಕಾಣುತ್ತಿತ್ತು.

ತಂದೆ (ಇದ್ದೂ ಇಲ್ಲದ), ತಾಯಿ (ಇರದಿದ್ದರೂ ಎಲ್ಲೋ ಇರುವ) ಇಲ್ಲದ ನನ್ನ ಮೇಲೆ ಈ ದಂಪತಿಗೆ ಕನಿಕರದ ಜೊತೆ ಮುಚ್ಚಟೆಯೂ ಇತ್ತು. ಮಾವನಾಗಲಿ, ಮಾಮಿಯಾಗಲಿ ಎಂದೂ ನನ್ನ ಬಗ್ಗೆ ಅಪ್ರಸನ್ನರಾದವರಲ್ಲ. ಅವರಿಗೆ ಸಂತಾನವಿಲ್ಲದಿದ್ದುದು ಇದಕ್ಕೆ ಕಾರಣವಿರಬಹುದು ಅಥವಾ ಇದು ಅವರ ಸ್ವಭಾವವೇ ಇರಬಹುದು.